<u>**ಕರ್ನಾಟಕ ವಿಧಾನ ಪರಿಷತ್ತು**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1054
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಬಳದರೆ ಗ್ರಾಮದ ಸರ್ವೆ ನಂ.260ಕ್ಕೆ ಸಂಬಂಧಿಸಿದಂತೆ ಭೂ ಅನ್ಯ ಕ್ರಾಂತ ಸಮಯದಲ್ಲಿ ಷರತ್ತುಗಳ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರೂ ಸಹ ಅದನ್ನು ಪಾಲಿಸದೇ ಭೂ ಅನ್ಯ ಕ್ರಾಂತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | 2019 ನೇ ಸಾಲಿನಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95 ಕ್ಕೆ ತಿದ್ದುಪಡಿ ತರಲಾಗಿದ್ದು, ಅಫಿಡವಿಟ್ ಬೇಸ್ಡ್ ಆನ್‌ಲೈನ್ ತಂತ್ರಾಂಶದ ಮೂಲಕ ಭೂಪರಿವರ್ತನೆಯನ್ನು ನಿರ್ವಹಿಸಲಾಗುತ್ತಿದೆ. ಬಳದರೆ ಗ್ರಾಮದ ಸ.ನಂ 260 ಕ್ಕೆ ಸಂಬಂಧಿಸಿದಂತೆ ಖಾತೆದಾರರು ಅಫಿಡವಿಟ್ ಸಂಖ್ಯೆ. 583119 ರ ರೀತ್ಯಾ ಭೂಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಮೇರೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಾದ ತಹಸೀಲ್ದಾರ್, ಚನ್ನರಾಯಪಟ್ಟಣ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ರವರಿಂದ ವರದಿ ಪಡೆಯಲಾಗಿದೆ. ಸದರಿ ಸಕ್ಷಮ ಪ್ರಾಧಿಕಾರಗಳ ಶಿಫಾರಸ್ಸಿನ ಮೇರೆಗೆ ಹಾಗೂ ತಹಸೀಲ್ದಾರ್, ಚನ್ನರಾಯಪಟ್ಟಣ ರವರು ತಮ್ಮ ವರದಿಯಲ್ಲಿ ಪ್ರಸ್ತಾಪಿತ ಪ್ರದೇಶದಲ್ಲಿ ಈಗಾಗಲೇ 47*53 ವಿಸ್ತೀರ್ಣದ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ವರದಿ ಮಾಡಿದ್ದರ ಮೇರೆ ಕರ್ನಾಟಕ ಭೂ ಕಂದಾಯ ನಿಯಮಗಳು, 1969ರ ನಿಯಮ 107 ರಂತೆ ಕೃಷಿಯೇತರ ಉದ್ದೇಶಕ್ಕೆ ಬಳಸಿದ್ದಕ್ಕೆ ಅನ್ವಯವಾಗುವ ದಂಡ ಶುಲ್ಕ ಒಟ್ಟು ರೂ. 3,990/- ಗಳ ಶುಲ್ಕವನ್ನು ವಿಧಿಸಿ ಭೂಪರಿವರ್ತನೆಯನ್ನು ನೀಡಲಾಗಿರುತ್ತದೆ. |
| (ಆ) | ಜಿಲ್ಲಾಧಿಕಾರಿಯವರು ಭೂ ಅನ್ಯ ಕ್ರಾಂತ ಮಾಡುವ ಸಮಯದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಕಟ್ಟಡ ನಿರ್ಮಾಣವಾಗಿರುವುದು ಜಮೀನಿನ ಮಾಲೀಕರು ನೋಟರೀಕೃತ ಪ್ರಮಾಣ ಪತ್ರದಲ್ಲಿ ತಿಳಿಸಿದ್ದರೂ ಸಹ ಭೂ ಅನ್ಯ ಕ್ರಾಂತ ಮಾಡಿರುವುದರಿಂದ ನ್ಯಾಯಾಲಯದ ಆದೇಶ ಸಂಖ್ಯೆ WP NO:8859/2021, ದಿನಾಂಕ:06/12/2021, WP NO:36314/2019 (LB-RES)PIL, ದಿನಾಂಕ:25/08/2021ರ ಉಲ್ಲಂಘನೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | |
| (ಇ) | ಸರ್ಕಾರದ ಆದೇಶ ಸಂಖ್ಯೆ ನ:ಅ:ಇ:93:ಎಂಡಬ್ಲೂಪಿ:2023,(ಭಾ-1) | |

| | | |
|---|---|---|
| | ದಿನಾಂಕ: 09/01/2024 ಹಾಗೂ ನ್ಯಾಯಾಲಯದ ಆದೇಶ ಉಲ್ಲಂಘನೆ ಮತ್ತು ಸರ್ಕಾರದ ಆದೇಶವನ್ನು ಸಹ ಪಾಲಿಸದೇ WP NO:13696/2022 (LB-RES), ದಿನಾಂಕ:27/09/2023ರ ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಭೂಪರಿವರ್ತನೆ ವೇಳೆ ಸರ್ಕಾರದ ನಿಯಮದಂತೆ ಅನ್ವಯವಾಗುವ ರಸ್ತೆ ಮಾರ್ಜಿನ್ ಬಿಡುವ ಕುರಿತು ಭೂಪರಿವರ್ತನೆ ಆದೇಶದಲ್ಲಿ ಷರತ್ತು ವಿಧಿಸಿ ಭೂಪರಿವರ್ತನೆ ನೀಡಲಾಗಿರುತ್ತದೆ. ಭೂಪರಿವರ್ತನೆ ನಂತರ ಲೇಔಟ್ ಹಾಗೂ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವ ವ್ಯಾಪ್ತಿಯು ಕಂದಾಯ ಇಲಾಖೆಯ ವ್ಯಾಪ್ತಿಗೆ ಬಾರದೆ ಇರುವುದರಿಂದ ಭೂಪರಿವರ್ತನೆ ವೇಳೆ ಯಾವುದೇ ನಿಯಮ ಉಲ್ಲಂಘನೆಯಾಗಿರುವುದಿಲ್ಲ. |
| (ಈ) | ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? | |

(ಕಡತ ಸಂಖ್ಯೆ:ಆರ್‌ಡಿ 69 ಎಲ್‌ಜಿಹೆಚ್ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು